**ಕರ್ನಾಟಕ ಸರ್ಕಾರ**
**ಉನ್ನತ ಶಿಕ್ಷಣ ಇಲಾಖೆ**
**6ನೇ ಮಹಡಿ, 2ನೇ ಗೇಟ್, ಬಹುಮಹಡಿಗಳ ಕಟ್ಟಡ,**
**ಅಂಬೇಡ್ಕರ್ ವೀಧಿ, ಬೆಂಗಳೂರು-560 001.**

ಸಂಖ್ಯೆ: ಇಡಿ 82 ಯುಎನ್ಇ 2026 ದಿನಾಂಕ:11.08.2026

**ಸಾರ್ವಜನಿಕ ಪ್ರಕಟಣೆ**

**ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಪತಿಗಳ ಹುದ್ದೆಯ ನೇಮಕಾತಿಗೆ ಅರ್ಜಿ**

1. ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಅಧಿನಿಯಮ 2011ರ ಪ್ರಕರಣ 13(2)ರನ್ವಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಪತಿಗಳ ನೇಮಕಾತಿ ಮಾಡಲು ಈ ಕೆಳಕಂಡ ಅರ್ಹತೆಯುಳ್ಳ ಪ್ರಾಧ್ಯಾಪಕರುಗಳ/ಜಾನಪದ ತಜ್ಞರುಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ:

    I. ಉನ್ನತ ಮಟ್ಟದ ಆಡಳಿತ ಶೈಕ್ಷಣಿಕ ಹಾಗೂ ಸಂಶೋಧನಾ ಸಾಮರ್ಥ್ಯ ಪ್ರಾಮಾಣಿಕತೆ, ಸಮಗ್ರತೆ/ಋಜುತ್ವ ನೈತಿಕ ಮೌಲ್ಯಗಳನ್ನು ಹಾಗೂ ಸಾಂಸ್ಥಿಕ ಬದ್ಧತೆಯನ್ನು ಹೊಂದಿರತಕ್ಕದ್ದು.

    II. ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಅಧಿನಿಯಮ 2011ರ ಪ್ರಕರಣ 13(4)ರನ್ವಯ ಖ್ಯಾತ ಜಾನಪದ ತಜ್ಞರಾಗಿರತಕ್ಕದ್ದು ಹಾಗೂ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಮಾರ್ಗಸೂಚಿಗಳನ್ವಯ ಕನಿಷ್ಠ 10 ವರ್ಷಗಳು ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ಅನುಭವ ಅಥವಾ ತತ್ಸಮಾನವಾದ ಸ್ಥಾನಮಾನದಲ್ಲಿ ವಿಖ್ಯಾತ ಸಂಶೋಧನಾ ಅಥವಾ ಶೈಕ್ಷಣಿಕ ಆಡಳಿತ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸಿದ ಅನುಭವವನ್ನು ಹೊಂದಿರತಕ್ಕದ್ದು;.

    III. ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಅಧಿನಿಯಮ 2011ರ ಪ್ರಕರಣ 13(5) ಮತ್ತು 13(6)ರಲ್ಲಿ ನಿಯಮಿಸಿರುವಂತೆ ನಾಲ್ಕು ವರ್ಷಗಳು ಅಥವಾ 67 ವರ್ಷಗಳ ವಯಸ್ಸಾಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಕುಲಾಧಿಪತಿಗಳ ಇಷ್ಟಪರ್ಯಂತ ಪದಧಾರಣೆಯನ್ನು ಹೊಂದಿರುತ್ತಾರೆ. ಆದುದರಿಂದ, ಕುಲಾಧಿಪತಿಗಳ ಇಷ್ಟಪರ್ಯಂತ ನಾಲ್ಕು ವರ್ಷಗಳ ಪದಧಾರಣ ಅವಧಿಯ ಅವಕಾಶವಿರುವ ವಯೋಮಿತಿಯನ್ನು ಹೊಂದಿರತಕ್ಕದ್ದು.

2. ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳು ಉನ್ನತ ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ (https://hed.karnataka.gov.in) ನೀಡಲಾಗುವ ಲಿಂಕ್‌ನ್ನು ಆಯ್ಕೆ ಮಾಡಿ ತಮ್ಮ ವಿದ್ಯಾರ್ಹತೆ, ಸಂಶೋಧನೆ, ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಅನುಭವ ಇತ್ಯಾದಿ ಸ್ವವಿವರಗಳನ್ನು ಅಗತ್ಯ ದಾಖಲೆಗಳೊಂದಿಗೆ PDF ರೂಪದಲ್ಲಿ ಅಪ್‌ಲೋಡ್ ಮಾಡಿ ಆನ್-ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸತಕ್ಕದ್ದು. ಒಮ್ಮೆ ಸಲ್ಲಿಸಿದ ಅರ್ಜಿಯಲ್ಲಿನ ಮಾಹಿತಿಯನ್ನು ಯಾವುದೇ ಹಂತದಲ್ಲಿ ಬದಲಾವಣೆ / ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ.

3. ***ಆನ್‌ಲೈನ್ ಅರ್ಜಿಯನ್ನು ಸಲ್ಲಿಸಿದ ನಂತರ, ಸ್ವೀಕೃತಿ ಪತ್ರವನ್ನು (Acknowledgement Receipt) ಡೌನ್‌ಲೋಡ್ ಮಾಡಿಕೊಂಡು, ಆನ್‌ಲೈನ್ ಅರ್ಜಿಯ 5 ಪ್ರತಿಗಳನ್ನು (Quintuplicate) ಹಾಗೂ ಎಲ್ಲಾ ಪೂರಕ ದಾಖಲೆಗಳೊಂದಿಗೆ ಸ್ವೀಕೃತಿಗಾಗಿ ಸರ್ಕಾರದ***

***ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, 6ನೇ ಮಹಡಿ, ಗೇಟ್ ಸಂಖ್ಯೆ 2, ಬಹುಮಹಡಿ ಕಟ್ಟಡ, ಬೆಂಗಳೂರು-560 001 ಇವರಿಗೆ, ಈ ಜಾಹೀರಾತು ಪ್ರಕಟವಾದ ದಿನಾಂಕದಿಂದ 30 ದಿನಗಳೊಳಗಾಗಿ ಸಲ್ಲಿಸಬೇಕು.***

4. ಪ್ರಸ್ತುತ ಸೇವೆಯಲ್ಲಿರುವ ವ್ಯಕ್ತಿಗಳು ಅವರ ವಿರುದ್ಧ ಇಲಾಖಾ ಕ್ರಿಮಿನಲ್ ವಿಚಾರಣೆಗಳು ಬಾಕಿ ಇರದ/ಹೂಡಲು ಉದ್ದೇಶಿಸಿರದ ಮತ್ತು ಈ ಹಿಂದೆ ವಿಚಾರಣೆಯನ್ನು ನಡೆಸಿ ದಂಡನೆ ವಿಧಿಸಲಾಗಿರದ ಬಗ್ಗೆ ಅವರು ಸೇವೆ ಸಲ್ಲಿಸುತ್ತಿರುವ ಸಂಸ್ಥೆಯ ಮುಖ್ಯಸ್ಥರಿಂದ ದೃಢೀಕರಿಸಿ ಪ್ರಮಾಣ ಪತ್ರಗಳನ್ನು ಹಾಗೂ ಸೇವೆಯಿಂದ ವಯೋನಿವೃತ್ತಿ ಹೊಂದಿರುವವರು ಈ ಕುರಿತಂತೆ ಸ್ವಯಂ ದೃಢೀಕರಣ ಪ್ರಮಾಣ ಪತ್ರಗಳನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. ಪ್ರಮಾಣ ಪತ್ರಗಳಲ್ಲಿ ತಪ್ಪು ಮಾಹಿತಿ ನೀಡಿರುವುದು ಕಂಡು ಬಂದಲ್ಲಿ ಸಂಬಂಧಿಸಿದವರನ್ನು ಕಠಿಣ ಕ್ರಮಕ್ಕೆ ಗುರಿಪಡಿಸಲಾಗುವುದು. ಈ ರೀತಿಯಲ್ಲಿ ಪ್ರಮಾಣ ಪತ್ರಗಳನ್ನು ಸಲ್ಲಿಸದ ವ್ಯಕ್ತಿಗಳನ್ನು ಪರಿಗಣಿಸಲಾಗುವುದಿಲ್ಲ.

5. ಅಪೂರ್ಣ ಹಾಗೂ ನಿಗದಿತ ಅವಧಿ/ಗಡುವು ಮುಕ್ತಾಯವಾದ ನಂತರ ಸ್ವೀಕೃತವಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅಂಚೆ ಅಥವಾ ಇತರೆ ಸ್ವರೂಪದ ವಿಳಂಬಗಳಿಗೆ ಉನ್ನತ ಶಿಕ್ಷಣ ಇಲಾಖೆಯು ಜವಾಬ್ದಾರವಾಗುವುದಿಲ್ಲ.

6. ನೇಮಕಾತಿ ಪ್ರಕ್ರಿಯೆಯಲ್ಲಿ ವಾಮ ಮಾರ್ಗದ ಮೂಲಕ ಅನುಚಿತ ಪ್ರಭಾವ ಬೀರಲು ಪ್ರಯತ್ನಿಸುವ ವ್ಯಕ್ತಿಗಳ ಅಭ್ಯರ್ಥಿತ್ವವನ್ನು ರದ್ದುಗೊಳಿಸಲಾಗುವುದು.

ಸಹಿ/-
ಸರ್ಕಾರದ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ

**GOVERNMENT OF KARNATAKA**
**Department of Higher Education**
**6th Floor, 2nd Gate, M.S.Building,**
**Dr. B.R.Ambedkar Veedhi, Bangalore**

E-No. ED 82 UNE 2026 11th August, 2026

## PUBLIC NOTICE

**Selection of Vice-Chancellor of Karnataka Janapada Vishwavidyalaya, Gotagodi, Haveri**

******

1. The Government of Karnataka invites applications for the selection of Vice-Chancellor of Karnataka Janapada Vishwavidyalaya, Gotagodi, Haveri, Karnataka as per section 13(2) of Karnataka Janapada Vishwavidyalaya Act, 2011 from eligible and distinguished Academicians/ Professors following credentials.

    I. A person of the highest level of competence, integrity, morals and institutional commitment;

    II. A distinguished academician/renowned folklorist as per section 13(4) of the Karnataka Janapada Vishwavidyalaya Act, 2011 and should have at least 10 years of experience as Professor in a University or ten years of experience in a reputed research or academic administrative institutions as per the guidelines of the University Grants Commission.

    III. As provided in the sec 13(5) and 13(6) of Karnataka Janapada Vishwavidyalaya Act, 2011, the Vice-Chancellor shall, subject to the pleasure of the Chancellor, hold the office for a maximum period of 4 years or until he attains the age of Sixty-Seven (67) years whichever is earlier. Consequently, a person to be appointed as Vice Chancellor shall have clear four years of tenure.

2. The Applications for the said post, along with their educational qualifications, research, academic and administrative experience etc., shall be applied through online link provided on the Department of Higher Education website https://hed.karnataka.gov.in. All required documents should be scanned and uploaded as PDF's along with the applications. Once the application has been submitted, no changes or modifications to any of the information furnished therein will be permitted at any stage.

.....2

3. ***After completing the online submission, kindly download the acknowledgement receipt and submit 5 hard copies (*****Quintuplicate*****) of the online application along with the all the supportive documents under acknowledgment to the Secretary to the Government, Higher Education Department, 6th Floor, Gate No. 2, Multi-Storied Building, Bangalore-560 001 within 30 days from the date of publication of this advertisement.***
4. In support of unblemished career and undoubted integrity, the applicant who is retired from service, should file a self-attested certificate to the effect that no departmental/criminal enquiry is instituted/pending against him or no enquiry is culminated in penalties and he is neither having the tainted service history nor the appointment dispute. Whereas, in case of applicant in service, he should file a certificate of his employer in this regard. The concerned will be subjected to stringent action if certificates are found to be false.
5. Incomplete applications and hard copies received after the stipulated time limit will not be entertained. This office is not responsible for postal or other kinds of delays.
6. The candidature of those who indulge in undue influencing on the selection process through unethical means will stand cancelled.

Sd/-
Secretary to Government,
Higher Education Department